"ತಾಳು, ಕರಮಚಂದ. ಇದನ್ನು ಉಡುಗೊರೆಯಾಗಿ ಕೊಟ್ಟ ಮಾಚಯ್ಯ ಶ್ರೀಮಂತ ಅಂತ ಹೇಳಬಹುದು. ಸ್ವೀಕರಿಸಿದವನು ಶ್ರೀಮಂತ ಆಗಿರಲೇಬೇಕಿಲ್ಲ, ಅಲ್ವೇ?"

"ಅತೀ ಆತ್ಮೀಯರಿಗೆ ಉಡುಗೊರೆ ಕೊಡುವಾಗ ಬೆಲೆ ಬಾಳುವಂತಹದನ್ನೇ ಕೊಡುವುದು ಸಹಜ. ಉಡುಗೊರೆಯಲ್ಲಿ ತಮ್ಮ ಹೆಸರು ಬರೆಸಿ, ಕೊಡುವುದು ಆತ್ಮೀಯರಿಗೆ ಮಾತ್ರ. ನೆರವಿನ ರೂಪದಲ್ಲಿ ಕೊಡುವುದು ಅಸಹಾಯಕರಿಗೆ. ಆವಾಗ ಹೆಸರು ಬರೆಸುವ ಸಾಧ್ಯತೆ ಇರುವುದಿಲ್ಲ. ಹಾಗಾಗಿ, ಈ ಉಡುಗೊರೆಯನ್ನು ಮಾಚಯ್ಯ ಕೊಟ್ಟಿದ್ದು ತನ್ನ ಶ್ರೀಮಂತ ಮಿತ್ರನಿಗೆ ಅಂತ ಅನಿಸುತ್ತೆ."

ಕರಮಚಂದನ ವಾದಕ್ಕೆ ನಾನು ತಲೆದೂಗಿದೆ.

"ಇನ್ನೊಂದು ವಿಚಿತ್ರ ಗಮನಿಸಿದೆಯಾ? ಈ ವಾಕಿಂಗ್ ಸ್ಟಿಕ್ ಬಳಸಿ ಸಾಕಷ್ಟು ಸಮಯ ಆದಂತಿದೆ. ತುಂಬಾ ಹೊಸದಾಗಿಲ್ಲ. ಕನಿಷ್ಠ ಒಂದೆರೆಡು ವರ್ಷಗಳಾಗಿರಬಹುದು. 'ಫ್ರಮ್ ತಿತ್ತೀರ ಮಾಚಯ್ಯ' ಅನ್ನುವ ಅಕ್ಷರಗಳಲ್ಲಿ ಮಣ್ಣು ತುಂಬಿ ತುಸು ಮಸುಕಾಗಿವೆ. ಆದರೆ ಅದರ ಪಕ್ಕದಲ್ಲಿರುವ ಕಮಲ ಮತ್ತು ನಕ್ಷತ್ರದ ಚಿತ್ರಗಳು ಆ ರೀತಿ ಮಸುಕಾಗಿಲ್ಲ. ಅಂದರೆ ಅರ್ಥ ಏನು? ಈ ಗುರುತುಗಳನ್ನು ತೀರಾ ಇತ್ತೀಚಿಗೆ ಮಾಡಿಸಿರಬೇಕು!!"

ಕರಮಚಂದ ಹೇಳಿದ ಮೇಲಷ್ಟೇ ನಾನು ಆ ವ್ಯತ್ಯಾಸವನ್ನು ಗುರುತಿಸಿದ್ದು!

"ಇದರಿಂದ ನಾವು ಇನ್ನೊಂದು ಊಹನೆ ಮಾಡಬಹುದು. ಈ ಗುರುತುಗಳನ್ನು ಮಾಡಿಸಿದ್ದು ತಿತ್ತೀರ ಮಾಚಯ್ಯ ಅಲ್ಲ. ಅದರ ಈಗಿನ ಮಾಲೀಕ ಈ ಗುರುತುಗಳನ್ನು ಮಾಡಿಸಿದ್ದಾನೆ ಅಂತ!"

"ಖಂಡಿತಾ, ಆದರೆ ಯಾಕೆ?"

"ಅದು ನಮಗೆ ಸಂಬಂಧಿಸಿದ್ದಲ್ಲ. ನಾವು ಇನ್ನೊಂದು ಊಹನೆಯನ್ನೂ ಮಾಡಬಹುದು. ಇದರ ಮಾಲೀಕ ಎಡಚ ಅಂತ."

"ಹೌದೇ? ಹೇಗೆ ಹೇಳುತ್ತಿ?"

"ಹಾಂ, ಇಲ್ಲಿ ನೋಡು, ವಾಕಿಂಗ್ ಸ್ಟಿಕ್ಕಿನ ತಳ ಭಾಗ. ಬಲಭಾಗದಲ್ಲಿ ಸವೆತ ತುಸು ಹೆಚ್ಚಿದೆ. ಎಡಗೈನಲ್ಲಿ ವಾಕಿಂಗ್ ಸ್ಟಿಕ್ ಹಿಡಿದುಕೊಂಡಾಗ, ಒತ್ತಡವು ವಾಕಿಂಗ್ ಸ್ಟಿಕ್ಕಿನ ಬಲಭಾಗದಲ್ಲಿ ಜಾಸ್ತಿ ಬಿದ್ದು, ಸವೆತ ಉಂಟಾಗುತ್ತೆ. ಸರಿ ತಾನೆ? ಬಲಗೈನಲ್ಲಾದರೆ, ಎಡಭಾಗದಲ್ಲಿ ಇರುತ್ತಿತ್ತು. ಎಡಕೈನಲ್ಲೇ ವಾಕಿಂಗ್ ಸ್ಟಿಕ್ ಹಿಡಿವವನು ಎಡಚನೇ ಆಗಿರುವ ಸಾಧ್ಯತೆ ಜಾಸ್ತಿ."

ನಮ್ಮ ಸಂಭಾಷಣೆಯನ್ನು ಬೆರಗಿನಿಂದ ಕೇಳುತ್ತಿದ್ದ ನಾಣಯ್ಯ ಮತ್ತೆ ಮಾತು ಸೇರಿಸಿದ,

"ಇನ್ನೂ ಒಂದು ವಿಚಿತ್ರ ಸಂಭವಿಸಿತು. ಸಂಜೆ ಐದರ ಹೊತ್ತಿಗೆ ಇಬ್ಬರು ಯುವಕರು ಬಂದು, 'ಮುದುಕನೊಬ್ಬ ಇಲ್ಲಿ ವಾಕಿಂಗ್ ಸ್ಟಿಕ್ ಬಿಟ್ಟು ಹೋಗಿದ್ದಾನಾ' ಅಂತ ವಿಚಾರಿಸಿದರು. ನಾನು ಇಲ್ಲ ಅಂತ ಹೇಳಿದೆ."

"ಅದರಲ್ಲಿ ವಿಚಿತ್ರ ಏನಿದೆ?"



"ಅವರು ಒರಟಾಗಿ ಕೇಳಿದ್ದರಿಂದ ಮತ್ತು ಬದಲಿಸಿಕೊಂಡು ಹೋದ ವಾಕಿಂಗ್ ಸ್ಟಿಕ್ ವಾಪಸು ತರದೇ ಇದ್ದುದರಿಂದ, ಅನುಮಾನಗೊಂಡು ನಾನು ಸುಳ್ಳು ಹೇಳಿದೆ. ಆಮೇಲೆ ಗೊತ್ತಾಯಿತು. ಅವರಿಬ್ಬರೂ ಆತನ ಮಕ್ಕಳಂತೆ. ಅವರು ತಂದೆಯನ್ನು ಮುದುಕ ಎಂದು ಸಂಬೋಧಿಸಿದ್ದು ವಿಚಿತ್ರ ಅಲ್ವೇ? ಅವರು ಕೊನೆಯಲ್ಲಿ ಹೇಳಿದ ಮಾತು ನನ್ನ ಸುಳ್ಳನ್ನು ಸಮರ್ಥಿಸಿತು... ಸುಳ್ಳು ಹೇಳಿದ್ರೆ ಜಾಗ್ರತೆ, ಆ ವಾಕಿಂಗ್ ಸ್ಟಿಕ್ಕನ್ನು ತಮಗೇ ಕೊಡಬೇಕು, ತಮ್ಮ ತಂದೆ ಬಂದರೂ ಕೊಡಬಾರದು ಎಂದು ಧಮಕಿ ಹಾಕಿ ಹೋದರು. ಅವರು ಬರುವ ಹೊತ್ತಿಗೆ ನಾನು ವಾಕಿಂಗ್ ಸ್ಟಿಕ್ಕನ್ನು ಒಳಗಡೆ ಅಡಸಿಟ್ಟಿದ್ದು ಒಳ್ಳೆದೇ ಆಯಿತು."

"ಹಾಗಿದ್ದರೆ ನಾವು ಇನ್ನೊಂದು ಊಹನೆಯನ್ನೂ ಮಾಡಬಹುದು."